DH photo



National Aeronautical Laboratory (NAL) Director A R Upadya and former director of Kidwai Institute Bangalore Vijayalaxmi Deshmane being felicitated with 'Visvesvaraya Science Awards' in Belgaum on Monday for their contribution to the science field, during 4th Kannada Science Conference at the Visvesvaraya Technological University premises. VTU Vice-Chancellor H P Khincha, ministers Basavaraj Bommai and Arvind Limbavali and Siddheshwar Swamiji look on.

# Minister regrets involvement of youths in terrorist activities

DH News Service

**Belgaum:** Higher Education Minister Arvind Limbavali expressed concern over increase in the number of medical and engineering students being part of terrorist activities and said the government was spending money on education with an intention to help the younger generation for a better future.

Speaking as one of the chief guests at the inaugural function of the Fourth Kannada Science Conference at Visvesvaraya Technological University (VTU) here on Monday, he said in some educational institutions students even hesitate to sing national anthem. The students should respect the national anthem and it was possible only through discipline.

The minister said there was need for teaching social values to these students so that they could cater to social responsibility and moral values. Mr Limbavali suggested starting of a international level engineering college at Muddenahalli, the birth place of Late Dr Visvesvaraya and assured of all necessary help from the government. State water resources minister Basavaraj Bommai, who also spoke on the occasion said science researches should reach the people from the four walls of the laboratories.

Bijapur Jnyanayogashrama seer Siddesshwar Samiji inaugurated the conference. Nagnur Rudrkshimutt seer Siddarama Swamiji, VTU Vice-Chancellor H P Khincha, Registrar K V A Balaji, Swdeshi Science campaign chief K I Vasu were present on the occasion.

National Aeronautic Laboratory Director A R Upadhya and former director of Kidwai Vijayalaxmi Deshamane were felicitated with Visvesvaraya Science Awards.

# ‘ವಿದ್ಯಾರ್ಥಿಗಳು ಭಯೋತ್ಪಾದಕರಾಗಬಾರದು’

ಪ್ರಜಾವಾಣಿ ವಾರ್ತೆ



ಬೆಳಗಾವಿಯ ವಿಟಿಯು ಆವರಣದಲ್ಲಿ ಸೋಮವಾರ ಆರಂಭವಾದ ನಾಲ್ಕನೇ ಕನ್ನಡ ವಿಜ್ಞಾನ ಸಮ್ಮೇಳನದಲ್ಲಿ ಡಾ.ಎ.ಆರ್. ಉಪಾಧ್ಯ ಹಾಗೂ ಡಾ.ವಿಜಯಲಕ್ಷ್ಮೀ ದೇಶಮಾನೆ ಅವರಿಗೆ ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ ಪ್ರದಾನ ಮಾಡಲಾಯಿತು. ಪ್ರೊ. ಎಚ್.ಪಿ. ಖಿಂಚಾ, ಸಚಿವ ಬಸವರಾಜ ಬೊಮ್ಮಾಯಿ, ಸಿದ್ಧೇಶ್ವರ ಸ್ವಾಮೀಜಿ, ಕೆ.ಐ. ವಾಸು, ಕೆ.ವಿ.ಎ. ಬಾಲಾಜಿ, ಸಿದ್ಧರಾಮ ಸ್ವಾಮೀಜಿ, ಸಚಿವ ಅರವಿಂದ ಲಿಂಬಾವಳಿ ಹಾಜರಿದ್ದರು.

ಬೆಳಗಾವಿ: ಭಯೋತ್ಪಾದಕ ಚಟುವಟಿಕೆಗಳಲ್ಲಿ ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಭಾಗಿಯಾಗುತ್ತಿರುವುದು ಕಳವಳಕಾರಿ ಎಂದು ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಆತಂಕ ವ್ಯಕ್ತಪಡಿಸಿದರು.

ಸ್ವದೇಶಿ ವಿಜ್ಞಾನ ಆಂದೋಲನ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಸೋಮವಾರ ಆರಂಭಗೊಂಡ ನಾಲ್ಕನೇ ಕನ್ನಡ ವಿಜ್ಞಾನ ಸಮ್ಮೇಳನದ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಶಿಕ್ಷಣಕ್ಕಾಗಿ ಸರ್ಕಾರ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿರುವುದು ಯುವಕರಿಗೆ ನಾಡಿನ ಹಿತಚಿಂತಕರಾಗಲಿ ಎಂದು. ಇದನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಬೇಕು. ಇದರ ಪ್ರಯೋಜನ ಪಡೆಯಬೇಕಾಗಿದ್ದ ವಿದ್ಯಾರ್ಥಿಗಳಲ್ಲಿ ಕೆಲವರು ಭಯೋತ್ಪಾದನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದು ಆತಂಕಕಾರಿ ಎಂದರು.

ಕೆಲವು ಸಂಸ್ಥೆಗಳಲ್ಲಿ ರಾಷ್ಟ್ರಗೀತೆ ಹಾಗೂ ನಾಡಗೀತೆಗಳನ್ನು ಹಾಡಲು ಹಿಂಜರಿಯುತ್ತಾರೆ. ಅವುಗಳಿಗೆ ಗೌರವ ನೀಡುವುದನ್ನು ಕಲಿತುಕೊಳ್ಳಬೇಕು. ಶಿಸ್ತಿನಿಂದ ಮಾತ್ರ ಒಂದಷ್ಟು ಕಲಿಯಲು ಸಾಧ್ಯ ಎಂದು ಸಚಿವರು ಹೇಳಿದರು.

ಇಂದಿನ ವಿದ್ಯಾರ್ಥಿಗಳು ನೈತಿಕ ಮೌಲ್ಯ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಮರೆತಿದ್ದಾರೆ. ಪಾಠದ ಜತೆಗೆ ಸಾಮಾಜಿಕ ಮೌಲ್ಯ ಸಾರುವ ಅಂಶಗಳನ್ನು ಕಲಿಸುವ ಅವಶ್ಯಕತೆ ಇದೆ ಎಂದು ಅವರು ಅಭಿಪ್ರಾಯಪಟ್ಟರು.

ಸರ್ ಎಂ. ವಿಶ್ವೇಶ್ವರಯ್ಯ ಅವರ ಹುಟ್ಟೂರಾದ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ವಿಶ್ವ ಮಟ್ಟದ ಎಂಜಿನಿಯರಿಂಗ್ ಕಾಲೇಜು ಆರಂಭಿಸಲು ಕ್ರಮಕ್ಕೆಗೊಳ್ಳುವಂತೆ ವಿಟಿಯು ಕುಲಪತಿ ಪ್ರೊ. ಎಚ್.ಪಿ. ಖಿಂಚಾ ಅವರಿಗೆ ಸೂಚಿಸಿದ ಸಚಿವರು, ಈ ನಿಟ್ಟಿನಲ್ಲಿ ಸರ್ಕಾರದಿಂದ ಅವಶ್ಯ ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು.

ಸಮ್ಮೇಳನ ಉದ್ಘಾಟಿಸಿ ಹಾಗೂ ‘ವಚನ ವಿಜ್ಞಾನ’ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ವಿಜಾಪುರ ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿ, ‘ವಚನ ಎಂದರೆ ಬರಿ ನೀತಿಶಾಸ್ತ್ರವಲ್ಲ. ವಿಜ್ಞಾನ ಸೇರಿದಂತೆ ಸರ್ವಸ್ವವನ್ನೂ ಅವು ಹೊಂದಿವೆ’ ಎಂದರು.

ಸರ್ ಎಂ. ವಿಶ್ವೇಶ್ವರಯ್ಯ ನಾಡಿನ ಏಳಿಗೆಗಾಗಿ ಶ್ರಮಿಸಿದವರು. ನೀವುಗಳು ಅವರಂತಹ ಎಂಜಿನಿಯರ್ ಆಗಬೇಕು. ದೇಶದ ಹಿರಿಮೆಯನ್ನು ಅರ್ಥ ಮಾಡಿಕೊಂಡು ಬದುಕಬೇಕು ಎಂದು ತಿಳಿಸಿದರು.

ಜಲಸಂಪನ್ಮೂಲ ಸಚಿವ ಬಸವರಾಜ ಬೊಮ್ಮಾಯಿ, ವಿಜ್ಞಾನದ ಸಂಶೋಧನೆಗಳು ನಾಲ್ಕು ಗೋಡೆಯಿಂದ ಹೊರಬಂದು ಜನರಿಗೆ ತಲುಪಬೇಕು. ಅಂದಾಗ ಮಾತ್ರ ಸಂಶೋಧನೆಯ ಪ್ರಯೋಜನ ಆಗುತ್ತದೆ ಎಂದು ಹೇಳಿದರು.

ನಾಗನೂರು ರುದ್ರಾಕ್ಷಿಮಠದ ಸಿದ್ಧರಾಮ ಸ್ವಾಮೀಜಿ, ವಿಟಿಯು ಕುಲಪತಿ ಪ್ರೊ.ಎಚ್.ಪಿ. ಖಿಂಚಾ, ಕುಲಸಚಿವ ಕೆ.ವಿ.ಎ. ಬಾಲಾಜಿ, ಆಂದೋಲನ ಅಧ್ಯಕ್ಷ ಕೆ.ಐ. ವಾಸು ಉಪಸ್ಥಿತರಿದ್ದರು.

ಎನ್.ಎ.ಎಲ್. ನಿರ್ದೇಶಕ ಡಾ.ಎ.ಆರ್. ಉಪಾಧ್ಯ ಹಾಗೂ ಬೆಂಗಳೂರಿನ ‘ಶಿದ್ಧಾಯಿ’ ಸಂಸ್ಥೆಯ ಮಾಜಿ ನಿರ್ದೇಶಕಿ, ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮೀ ದೇಶಮಾನೆ ಅವರಿಗೆ ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ ನೀಡಿ ಗೌರವಿಸಲಾಯಿತು. ಪಂಡಿತ್ ಭೀಮಸೇನ ಜೋಶಿ ಅನುಪಸ್ಥಿತಿಯಲ್ಲಿ ಅವರಿಗೆ ಪುರಸ್ಕಾರ ಪ್ರದಾನ ಮಾಡಲಾಯಿತು.

# ಸಾಮಾಜಿಕ ಜವಾಬ್ದಾರಿ ನಿರ್ವಹಿಸಲು ಅಭಿಯಂತರರಿಗೆ ಕರೆ

ಬೆಳಗಾವಿ, 15– ವಿದೇಶಕ್ಕೆ ಹೋಗುವ ಇಂಜನೀಯರಿಂಗ್ ವಿದ್ಯಾರ್ಥಿಗಳು ಅಭಿಯಂತರರು ಮೂಲ ಭಾರತೀಯರು ಎಂಬುದನ್ನು ಮರೆಯಬಾರದೆಂದು ರಾಜ್ಯ ಉನ್ನತ ಶಿಕ್ಷಣ ಖಾತೆ ಸಚಿವ ಅರವಿಂದ ಲಿಂಬಾವಳಿ ಹೇಳಿದ್ದಾರೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಿರ್ಮಿಸಲಾದ ಸುಸಜ್ಜಿತ ಪ್ರೇಕ್ಷಾಗೃಹ ಹಾಗೂ ನಾಲ್ಕನೇಯ ಕನ್ನಡ ವಿಜ್ಞಾನ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಪ್ರಪಂಚದ ಅನೇಕ ದೇಶಗಳಲ್ಲಿ ಹೆಚ್ಚಿನ ಭಾರತೀಯರು ಇಂಜನೀಯರ್‌ರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅನೇಕ ಇಂಜನೀ ಯರಿಂಗ್ ವಿದ್ಯಾರ್ಥಿಗಳು ಕೂಡಾ ಉದ್ಯೋಗಕ್ಕಾಗಿ ವಿದೇಶಗಳಿಗೆ ಹೋಗುತ್ತಿದ್ದು, ಅವರೆಲ್ಲರೂ ಭಾರತೀಯತೆ ಮರೆಯಬಾರದು. ಈ ದೇಶದ ಇತಿಹಾಸ, ಪರಂಪರೆ ವಿಜ್ಞಾನವನ್ನು ಪ್ರಚುರಪಡಿಸುವ, ದೇಶಕ್ಕೆ ಸಹಕಾರಿಯಾಗುವ ಅಂಶಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಅವರು ಹೇಳಿದರು.

ದೇಶಕ್ಕಾಗಿ ದುಡಿದ ಸರ್ ಎಂ. ವಿಶ್ವೇಶ್ವರಯ್ಯನವರು ನಾಡಿನ ಪ್ರತಿಯೊಬ್ಬ ವಿದ್ಯಾರ್ಥಿಯು ಹೆಮ್ಮೆಪಡಬೇಕು. ಈ ದೇಶದ ಸಂಸ್ಕೃತಿ, ಧಾರ್ಮಿಕ ಸ್ಥಿತಿ, ಸಾಮಾಜಿಕ ಜವಾಬ್ದಾರಿಯನ್ನು ಮರೆಯಬಾರದೆಂದರು. ಶಿಸ್ತು ಇದ್ದಲ್ಲಿ ಮಾತ್ರ ಶಿಕ್ಷಣದಲ್ಲಿ ಉನ್ನತ ಗುರಿ ಸಾಧಿಸಬಹುದು. ತಾಂತ್ರಿಕತೆಯ ದುರ್ಬಳಕೆ ಮಾಡಬಾರದೆಂದರು.

ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ನಿಟ್ಟಿನಲ್ಲಿ ರಾಜ್ಯ ಸರಕಾರ ಕಾರ್ಯಪ್ರವೃತ್ತವಾಗಿದ್ದು, ವಿಶ್ವೇಶ್ವರಯ್ಯನವರ ಜನ್ಮಸ್ಥಳ ಚಿಕ್ಕಬಳ್ಳಾಪುರ ಜಿಲ್ಲೆಯ ಮುದೇನಹಳ್ಳಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಸಂಯೋಜಿತ ಇಂಜನೀಯರಿಂಗ ಕಾಲೇಜನ್ನು ಸ್ಥಾಪಿಸುವುದಾಗಿ ಸಚಿವರು ಘೋಷಿಸಿದರು.

ರಾಜ್ಯ ಸರಕಾರವು ಉನ್ನತ ಶಿಕ್ಷಣದಲ್ಲಿ ಶೇ. ೧೧ ರಿಂದ ೧೫ ರವರೆಗೆ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲಾಗುವುದು. ಈ ವರ್ಷ ಪಿ.ಯು.ಸಿ. ಪೂರಕ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಕೂಡಾ ಸಿ.ಇ.ಟಿ. ಪರೀಕ್ಷೆಗೆ ಅವಕಾಶ ನೀಡಲಾಗುತ್ತಿದ್ದು, ಇದಕ್ಕಾಗಿ ಪ್ರತ್ಯೇಕ ಸೀಟುಗಳನ್ನು ಕಾಯ್ದಿರಿಸಲಾಗುತ್ತದೆ.

ಇಂಜನೀಯರಿಂಗ್ ವಿದ್ಯಾರ್ಥಿಗಳು ಕೇವಲ ಸಾಫ್ಟವೇರ್ ಕ್ಷೇತ್ರದಲ್ಲಿ ಭವಿಷ್ಯ ರೂಪಿಸಿಕೊಳ್ಳಲು ಪ್ರಯತ್ನಿಸದೇ ತಾಂತ್ರಿಕ ವಿಷಯಗಳಲ್ಲಿ ಸಂಶೋಧನೆ ಮಾಡಿ ರಾಷ್ಟ್ರಕ್ಕೆ ಆದ ಕೊಡುಗೆ ನೀಡಬೇಕು. ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ವ್ಹಿಡಿಯೋ ಕಾನ್ಫರನ್ಸಿಂಗ್, ಎಜ್ಯುಸ್ಯಾಟ್ ಇತರ ತಾಂತ್ರಿಕತೆವುಳ್ಳ ಶಿಕ್ಷಣ ಸೌಲಭ್ಯ ವ್ಯವಸ್ಥೆ ಹೊಂದಿದ್ದು, ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚಿನ ಲಾಭ ದೊರಕಿಸಿಕೊಡಲು ಕರೆ ನೀಡಿದರು.

ಜಿಲ್ಲಾ ಉಸ್ತುವಾರಿ ಹಾಗೂ ಜಲಸಂಪನ್ಮೂಲ ಖಾತೆ ಸಚಿವ ಬಸವರಾಜ ಬೊಮ್ಮಾಯಿ, ಭಾರತ ಸಕಲ ಸೌಲಭ್ಯಗಳನ್ನು ಹೊಂದಿದೆ. ಸಂಪರ್ಕ ಕೊರತೆಯಿಂದಾಗಿ ಭಾರತವು ಹೋಗಬಹುದಾದಷ್ಟು ಎತ್ತರಕ್ಕೆ ಹೋಗಲು ಸಾಧ್ಯವಾಗಿಲ್ಲ, ಇಲ್ಲಿಯ ನಾಗರಿಕರು ವೈಯಕ್ತಿಯವಾಗಿ ಒಳ್ಳೆಯವರಾಗಿದ್ದರೂ ಕೂಡಾ ಸಂಘಟನಾತ್ಮಕ ಪ್ರಯತ್ನ ಶೂನ್ಯವಾಗಿದೆ. ಭಾರತದಲ್ಲಿ ತಾಂತ್ರಿಕತೆ ವಿಜ್ಞಾನದ ಸದ್ಬಳಕೆ ಆಗಬೇಕು.

ಆಡಳಿತಗಾರರು, ಅಭಿಯಂತರರು, ವೈದ್ಯರು ವಿಜ್ಞಾನದ ಬೆಳವಣಿಗೆ ಆಗಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು ನಾಲ್ಕನೇ ಕನ್ನಡ ವಿಜ್ಞಾನ ಸಮ್ಮೇಳನ ಆಯೋಜಿಸಿರುವುದು ಹೆಮ್ಮೆಯ ಸಂಗತಿ. ಈ ವಿಶ್ವವಿದ್ಯಾನಿಲಯದ ತಾಂತ್ರಿಕತೆಯು ಜನಸಾಮಾನ್ಯರಿಗೆ ನೆರವಾಗಲಿ ಎಂದು ಹೇಳಿದರು.

ವಿಜಾಪೂರ ಜ್ಞಾನ ಯೋಗಾಶ್ರಮದ ಶ್ರೀ. ಸಿದ್ದೇಶ್ವರ ಸ್ವಾಮಿಗಳು ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ಅಧ್ಯಕ್ಷತೆವಹಿಸಿದ್ದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಕುಲಪತಿ ಡಾ ಹೆಚ್.ಪಿ. ಖಿಂಚಾ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು.

ಬೆಳಗಾವಿಯ ಶ್ರೀ. ಸಿದ್ಧರಾಮ ಮಹಾಸ್ವಾಮಿಗಳು ಸಾನಿಧ್ಯವ ಹಿಸಿದ್ದರು. ಸಂಸದ ಸುರೇಶ ಅಂಗಡಿ, ಡಾ. ಪ್ರಭಾಕರ ಕೋರೆ, ಶಾಸಕ ಸಂಜಯ ಪಾಟೀಲ, ಜಿಲ್ಲಾಧಿಕಾರಿ ಡಾ ಜಿ. ರವಿಶಂಕರ, ವಿಶ್ವವಿದ್ಯಾಲಯದ ಕುಲಸಚಿವ ಕೆ.ವಿ.ಎ. ಬಾಲಾಜಿ, ಸ್ವದೇಶಿ ವಿಜ್ಞಾನ ಆಂದೋಲನದ ಅಧ್ಯಕ್ಷ ಪ್ರೊ. ವಾಸು ಉಪಸ್ಥಿತರಿದ್ದರು.

ಬೆಂಗಳೂರಿನ ರಾ.ವೈ.ಪ್ರ. ನಿರ್ದೇಶಕ ಡಾ ಎ.ಆರ್. ಉಪಾಧ್ಯಾ, ಬೆಂಗಳೂರ ಕಿದ್ವಾಯಿ ಪ್ರಾಧ್ಯಾಪಕ ಡಾ ವಿಜಯಲಕ್ಷ್ಮಿ ದೇಶಮಾನೆ ಪ್ರಖ್ಯಾತ ಹಿಂದೂಸ್ತಾನಿ ಗಾಯಕ ಪದ್ಮಭೂಷಣ ಪಂಡಿತ ಭೀಮಸೇನ ಜೋಶಿ ಅವರಿಗೆ ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ ನೀಡಿ ಗೌರವಿಸಲಾಯಿತು. ಅನೇಕ ಕನ್ನಡ ವಿಜ್ಞಾನ ಸಮ್ಮೇಳನದ ವಿಷಯ ಭಾರತೀಯ ಪರಂಪರೆಯ ಯಂತ್ರ ವಿಜ್ಞಾನ ತಂತ್ರಜ್ಞಾನಗಳು (ಹರಪ್ಪದಿಂದ ಹಂಪಿ ಹಾಗೂ ಶ್ರೀಹರಿಕೋಟದವರೆಗೆ) ಎಂಬುವುದಾಗಿತ್ತು.

**ಉದ್ಘಾಟನೆ:** ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಿಸಲಾಗಿರುವ ೬ ಕೋ.ರೂ. ವೆಚ್ಚದ ಹವಾ ನಿಯಂತ್ರಿತ ಪ್ರೇಕ್ಷಾಗೃಹ (ಆಡಿಟೋರಿಯಂ) ವನ್ನು ಉನ್ನತ ಶಿಕ್ಷಣ ಖಾತೆ ಸಚಿವ ಅರವಿಂದ ಲಿಂಬಾವಳಿ ಉದ್ಘಾಟಿಸಿದರು.

ಈ ಪ್ರೇಕ್ಷಾಗೃಹವು ೮೦೦ ಆಸನ ಹೊಂದಿದ್ದು, ವಿಶ್ವವಿದ್ಯಾಲಯದ ಮಟ್ಟದ ವಿಜ್ಞಾನ ಸಮ್ಮೇಳನಗಳು, ವಿಚಾರ ಸಂಕಿರಣಗಳು, ಕಾರ್ಯಾಗಾರ ಸಾಂಸ್ಕೃತಿಕ ಕಾರ್ಯಕ್ರಮ ಇಲ್ಲಿ ನಡೆಸಲಾಗುತ್ತದೆ.